ಅನುಬಂಧ-2 (ವೆಚ್ಚ: ರೂ.ಲಕ್ಷಗಳಲ್ಲಿ)

ಕ್ರ ಸಂ.	ಸ.ನೀ.ಕೆರೆಯ ಹೆಸರು	ಯೋಜನೇತರ ಲೆಕ್ಕ ಶೀರ್ಷಿಯಡಿ ವಾರ್ಷಿಕ ನಿರ್ವಹಣೆ ಮತ್ತು ವಿಶೇಷ ದುರಸ್ತಿ ವೆಚ್ಚ.			ವೆಚ್ಚ ಜೂನ್ 08ರವರೆಗೆ.
		2005-06	2006-07	2007-08	
1	ಭಾಲ್ಕಿ	0.43	1.69	0.50	0.38
2	ಅಂಬೆಸಾಂಗವಿ.	0.75	0.87	1.26	0.38
3	ಹಾಲ ಹಿಪ್ಪರ್ಗಾ	2.26	3.00	2.15	0.26
4	ಹುಪಳಾ	2.21	0.45	2.87	0.23
5	ಕೊಸಮ	0	0.99	0.10	0
6	ಧನ್ನುರಾ	0.63	0.18	1.03	0
7	ಜೈಗಾಂವ	0.16	0.61	0	0
8	ಕಳಸದಾಳ-2ನೇ ಸೈಟ್	1.14	0.47	0.42	0
9	ಕೋನಮೇಲಕುಂದಾ ಇಂಗು ಕೆರೆ.	0	0	0	0
10	ತೇಗಂಪೂರ -2ನೇ ಸೈಟ್ ಇಂಗು ಕೆರೆ.	0	0	0	0
	ಒಟ್ಟು	7.58	8.26	8.33	1.25

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : (366)136
ಸದಸ್ಯರ ಹೆಸರು : ಶ್ರೀ ಗುರುಪಾದಪ್ಪ ನಾಗಮಾರ ಪಲ್ಲಿ
ಉತ್ತರಿಸುವ ಸಚಿವರು : (ಶ್ರೀ ಬಸವರಾಜ್ ಬೊಮ್ಮಾಯಿ)
ಜಲ ಸಂಪನ್ಮೂಲ ಸಚಿವರು

ಅ) ಬೀದರ್ ಜಿಲ್ಲೆಯಲ್ಲಿ ಮಾಂಜ್ರಾ ನದಿಯ ನೀರನ್ನು ಸಮರ್ಪಕವಾಗಿ ಉಪಯೋಗಿಸಿಕೊಳ್ಳುವ ಸಲುವಾಗಿ ಎಷ್ಟು ಬ್ರಿಡ್ಜ್-ಕಂ-ಬ್ಯಾರೇಜ್ ಮತ್ತು ಏತ ನೀರಾವರಿ ಯೋಜನೆಯನ್ನು ನಿರ್ಮಿಸಲು ಸರ್ವೇ ಮಾಡಲಾಗಿದೆ;

ಕೃಷ್ಣಾ ಭಾಗ್ಯ ಜಲ ನಿಗಮದಡಿ ಬೀದರ್ ಜಿಲ್ಲೆಯ ಭಾಲ್ಕಿ ಮತ್ತು ಔರಾದ್ ತಾಲೂಕುಗಳಲ್ಲಿ ಮಾಂಜ್ರಾ ನದಿಗೆ ಅಡ್ಡಲಾಗಿ ಸರ್ಕಾರಿ ಆದೇಶ ಸಂ: ಜಸಂಇ 117 ಎಂಟಿಜೆಡ್ 2002 ದಿನಾಂಕ 8/8/2003 ರನ್ವಯ 4.80 ಟಿಎಂಸಿ ನೀರಿನ ಬಳಕೆಗಾಗಿ ಈ ಕೆಳಕಂಡ ನಾಲ್ಕು ಸರಣಿ ಬ್ಯಾರೇಜುಗಳನ್ನು ಕೈಗೆತ್ತಿಕೊಂಡು ಅನುಷ್ಠಾನಗೊಳಿಸಲು ಆದೇಶ ನೀಡಲಾಗಿರುತ್ತದೆ.

(1) ಜೀರಗಿಹಾಳ ಬ್ಯಾರೇಜ್, (2) ಮಾಣೀಕೇಶ್ವರ ಬ್ಯಾರೇಜ್, (3) ಹಾಲಹಳ್ಳಿ ಬ್ಯಾರೇಜ್ ಹಾಗೂ (4) ಚಂದಾಪುರ ಬ್ಯಾರೇಜ್

ಸದರಿ ನಾಲ್ಕು ಬ್ಯಾರೇಜುಗಳ ಸರ್ವೇ ಕಾರ್ಯವನ್ನು ಪ್ರಧಾನ ಇಂಜಿನಿಯರ್, ಜಲಸಂಪನ್ಮೂಲ ಅಭಿವೃದ್ಧಿ ಸಂಸ್ಥೆ ಅಧೀನದಲ್ಲಿ 1995 ರಲ್ಲಿ ಕೈಗೆತ್ತಿಕೊಳ್ಳಲಾಗಿರುತ್ತದೆ.

ಸದರಿ 4 ಬ್ರಿಡ್ಜ್-ಕಂ-ಬ್ಯಾರೇಜ್‌ಗಳನ್ನು ಜೀರಗಿಹಾಳ್ ಗ್ರಾಮ, ಮಾಣೀಕೇಶ್ವರ ಗ್ರಾಮ, ಹಾಲಹಳ್ಳಿ ಗ್ರಾಮ ಹಾಗೂ ಚಂದಾಪುರ ಗ್ರಾಮಗಳ ಹತ್ತಿರ ನಿರ್ಮಿಸಲಾಗುವುದು.

ಅ) ಹಾಗಿದ್ದಲ್ಲಿ, ಯಾವಾಗ ಈ ಸರ್ವೇ ಕಾರ್ಯವನ್ನು ಮಾಡಲಾಗಿದೆ; ಯಾವ ಯಾವ ಗ್ರಾಮಗಳಲ್ಲಿ ಇವುಗಳನ್ನು ನಿರ್ಮಿಸಲಾಗುವುದು;

ಇ) ಇದಕ್ಕೆ ತಗಲುವ ವೆಚ್ಚವೆಷ್ಟು; ಯಾವಾಗ ಈ ಕಾಮಗಾರಿಗಳನ್ನು ಪ್ರಾರಂಭಿಸಲಾಗುವುದು;

ಕೃಷ್ಣಾ ಭಾಗ್ಯ ಜಲ ನಿಗಮದಡಿ ಕೈಗೆತ್ತಿಕೊಂಡು 4 ಸರಣಿ ಬ್ರಿಡ್ಜ್-ಕಂ-ಬ್ಯಾರೇಜ್‌ಗಳಿಗಾಗಿ ತಗಲುವ ವೆಚ್ಚ ರೂ.243.35 ಕೋಟಿ. ಸದರಿ ಬ್ಯಾರೇಜುಗಳ ಕಾಮಗಾರಿಗಳನ್ನು ಜುಲೈ 2006 ರಲ್ಲಿ ಪ್ರಾರಂಭಿಸಲಾಗಿರುತ್ತದೆ.

ಈ) ಇವುಗಳ ನಿರ್ಮಾಣದಿಂದ ಎಷ್ಟು ಎಕರೆ ಜಮೀನುಗಳಿಗೆ ನೀರಾವರಿ ಸೌಲಭ್ಯ ದೊರಕುತ್ತದೆ;

ಸದರಿ 4 ಬ್ರಿಡ್ಜ್-ಕಂ-ಬ್ಯಾರೇಜ್‌ಗಳಿಂದ ಒಟ್ಟು 31,313 ಎಕರೆ ಜಮೀನಿಗೆ ನೀರಾವರಿ ಸೌಲಭ್ಯ ದೊರಕುತ್ತದೆ.

ಉ) ಶೀಘ್ರವಾಗಿ ಈ ಯೋಜನೆಗಳನ್ನು ಪ್ರಾರಂಭಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು;

ಈಗಾಗಲೇ ಕೃಷ್ಣಾ ಭಾಗ್ಯ ಜಲ ನಿಗಮದಡಿ ಮಾಂಜ್ರಾ ನದಿಗೆ ಅಡ್ಡಲಾಗಿ ಕೈಗೆತ್ತಿಕೊಂಡ 4 ಸರಣಿ ಬ್ರಿಡ್ಜ್-ಕಂ-ಬ್ಯಾರೇಜು ಕಾಮಗಾರಿಗಳನ್ನು ಪ್ರಾರಂಭಿಸಲಾಗಿದ್ದು, ಕಾಮಗಾರಿಗಳು ಪ್ರಗತಿಯ ವಿವಿಧ ಹಂತದಲ್ಲಿವೆ.

ಊ) ಮಾಂಜ್ರಾ ನದಿಗೆ ನಿಜಾಂ ಸಾಗರದಿಂದ ಹರಿದು ಬರುವ ರಾಜ್ಯದ ಪಾಲಿನ ನೀರನ್ನು ಪೂರ್ಣವಾಗಿ ಉಪಯೋಗಿಸಿಕೊಳ್ಳಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಗೋದಾವರಿ ಕಣಿವೆಯ ಮಾಂಜ್ರಾ ಉಪ ಕಣಿವೆಯಲ್ಲಿ ಬೀದರ್ ಜಿಲ್ಲೆಗೆ ಒಟ್ಟು 22.37 ಟಿಎಂಸಿ ನೀರು ಹಂಚಿಕೆಯಾಗಿದೆ. ಈ ಪೈಕಿ 2.50 ಟಿಎಂಸಿ ಆಂಧ್ರ ಪ್ರದೇಶದ ನಿಜಾಂ ಸಾಗರ ಯೋಜನೆಯಿಂದ ಹರಿದು ಬರುವ ಪ್ರಮಾಣವೆಂದು

ನಿಗದಿಪಡಿಸಲಾಗಿದೆ. ಸದರಿ 2.50 ಟಿಎಂಸಿ ನೀರಿನ ಹಂಚಿಕೆ ಪ್ರಮುಖವಾಗಿ ಔರಾದ್ ತಾಲ್ಲೂಕಿನ ನಿಗದಿತ ಪ್ರದೇಶಕ್ಕೆ ಅನ್ವಯಿಸುತ್ತದೆ. ಈ ನೀರಿನ ಪ್ರಮಾಣದಲ್ಲಿ ಈಗಾಗಲೇ ಅಸ್ಥಿತ್ವದಲ್ಲಿರುವ ಹದಿನಾರು(16) ಸಣ್ಣ ನೀರಾವರಿ ಯೋಜನೆಗಳಿಗೆ 0.742 ಟಿಎಂಸಿ ನೀರು ಬಳಕೆಯಾಗುತ್ತದೆ. ಉಳಿದ 1.756 ಟಿಎಂಸಿ ಬಳಕೆ ಮಾಡುವ ಉದ್ದೇಶದಿಂದ ಔರಾದ್ ತಾಲೂಕಿನಲ್ಲಿ ಒಟ್ಟು 43 ಸ್ಥಳಗಳಲ್ಲಿ 1.47 ಟಿಎಂಸಿ ನೀರಿನ ಬಳಕೆಗಾಗಿ ಗುರುತಿಸಿ, ಪೂರ್ವಭಾವಿ ಸರ್ವೇಷಣೆ ನಡೆಸಿ ವರದಿಯನ್ನು ಸಣ್ಣ ನೀರಾವರಿ ಇಲಾಖೆಯಿಂದ ಪಡೆಯಲಾಗಿದೆ. ಇನ್ನುಳಿದ 0.268 ಟಿಎಂಸಿ ನೀರಿನ ಪ್ರಮಾಣದಲ್ಲಿ ಔರಾದ್ ತಾಲೂಕಿನ ಮತ್ತು ಬೀದರ್ ಜಿಲ್ಲೆಯೆಲ್ಲಿ ಬೇರೆ ಸೂಕ್ತ ಸ್ಥಳಗಳಲ್ಲಿ ಇಂಗು ಕೆರೆಗಳು, ಅಣೆಕಟ್ಟುಗಳು, ಚೆಕ್ ಡ್ಯಾಂಗಳು ಸಣ್ಣ ನೀರಾವರಿಯಡಿ ನಿರ್ಮಿಸಬಹುದಾಗಿದೆ. ಈ 43 ಯೋಜನೆಗಳ ಪೈಕಿ 10 ಯೋಜನೆಗಳಿಗೆ ಸಣ್ಣ ನೀರಾವರಿರಡಿ ಮಂಜೂರಾತಿ ನೀಡಿದ್ದು, ವಿವಿಧ ಹಂತದಲ್ಲಿವೆ.

ವಿಷಯ: ಬೀದರ್ ಜಿಲ್ಲೆಯಲ್ಲಿ ಭಾರೀ ಕೈಗಾರಿಕೆಗಳನ್ನು ಸ್ಥಾಪಿಸಲು ಕೈಗೊಂಡಿರುವ ಕ್ರಮ

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	**:**	**(367)137**
2. ಸದಸ್ಯರ ಹೆಸರು	**:**	**ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ (ಬೀದರ್)**
3. ಉತ್ತರಿಸುವ ಸಚಿವರು	**:**	**ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು(ಶ್ರೀ ಮುರುಗೇಶ ಆರ್.ನಿರಾಣಿ)**

ಅ. ಬೀದರ್ ಜಿಲ್ಲೆಯಲ್ಲಿ ಭಾರಿ ಮತ್ತು ಮಧ್ಯಮ ಕೈಗಾರಿಕೆಗಳ ಸ್ಥಾಪನೆಯನ್ನು ಉತ್ತೇಜಿಸಲು ಸರ್ಕಾರ ಯಾವ ಕ್ರಮಗಳನ್ನು ಕೈಗೊಂಡಿದೆ;

ನೂತನ ಕೈಗಾರಿಕಾ ನೀತಿ 2006–11ರಂತೆ - ಬೀದರ್ ಜಿಲ್ಲೆಯ 4 ತಾಲ್ಲೂಕುಗಳನ್ನು ಅತ್ಯಂತ ಹಿಂದುಳಿದ ತಾಲ್ಲೂಕುಗಳೆಂದು ಹಾಗೂ ಬೀದರ್ ತಾಲ್ಲೂಕನ್ನು ಹಿಂದುಳಿದ ತಾಲ್ಲೂಕು ಎಂದು ಗುರುತಿಸಿದ್ದು, ಈ ತಾಲ್ಲೂಕುಗಳಲ್ಲಿ ಸ್ಥಾಪಿತವಾಗುವ ಕೈಗಾರಿಕೆಗಳಿಗೆ ಹೆಚ್ಚಿನ ಪ್ರೋತ್ಸಾಹ ಮತ್ತು ರಿಯಾಯಿತಿಗಳನ್ನು ನೀಡಲಾಗುತ್ತಿದೆ.